

ಆಹಾ ಸುದ್ದಿ!

★ ಸಸಿತೋಟ

ಕಳೆದ ತಿಂಗಳು ಮುಕ್ತಾಯಗೊಂಡ ವಿಶ್ವ ಕಪ್ ಫುಟ್‌ಬಾಲ್‌ನಲ್ಲಿ ಬ್ರೆಜಿಲ್ ತಂಡಕ್ಕೆ ನಿರಾಸೆಯಾಗಿರಬಹುದು. ಹಾಗಂತ ದೇಶದ ಜನ ಖಿನ್ನತೆಯಿಂದ ಸುಮ್ಮನೆ ಕುಳಿತಿಲ್ಲ. ಈಗ ಮಿಸ್ ಬಮ್‌ಬಮ್ (ಸುಂದರ ಹಿಂಭಾಗ) ಸ್ಪರ್ಧೆಗೆ ಅಣಿಯಾಗುತ್ತಿದ್ದಾರಂತೆ. 27 ಮಂದಿ ಯುವತಿಯರು ಪೈಪೋಟಿ ನಡೆಸುತ್ತಿದ್ದಾರಂತೆ. ಫುಟ್‌ಬಾಲ್‌ನಲ್ಲಿ ಹೋದ ಮಾನವನ್ನು ಈ ರೀತಿ ಮತ್ತೆ ಬಿಚ್ಚಿ ತೋರಿಸುವ ಪರಿ ಏಕೋ?




ಪ್ಯಾರಿಸ್‌ನಲ್ಲಿ 'ಪ್ರೀತಿ ಮಾಡಿ, ಆದರೆ ಬೀಗವನ್ನು ಪ್ರೀತಿ ಮಾಡಬೇಡಿ' ಎಂಬ ಪ್ರಚಾರ ಕಾರ್ಯ ಆರಂಭವಾಗಿದೆಯಂತೆ. ಪ್ರೇಮಿಗಳು ತಮ್ಮ ಪ್ರೀತಿಯನ್ನು ಭದ್ರಪಡಿಸಲು ಅಲ್ಲಿರುವ ಸೇತುವೆಗಳಿಗೆ ಬೀಗದ ತಟ್ಟೆ ನೇತಾಡಿಸಿ ಕೀಲಿಕೈಗಳನ್ನು ನದಿಗೆ ಎಸೆಯುತ್ತಾರಂತೆ. ಕೆಲವು ಸೇತುವೆಗಳು ಬೀಗದ ತಟ್ಟೆಗಳ ಭಾರಕ್ಕೆ ಬಿರುಕು ಬಿಟ್ಟು ಅಲ್ಲಿಯ ಆಡಳಿತಕ್ಕೆ ತಲೆನೋವು ತಂದಿದೆಯಂತೆ. ಸೇತುವೆಯೇ ಬಿರುಕು ಬಿಟ್ಟಿದೆ ಎಂದರೆ ಪ್ರೀತಿಯಲ್ಲೂ ಬಿರುಕು ಬಿಡುವ ಸಂಕೇತವಿದು ಎಂದು ಪ್ರೇಮಿಗಳು ಅರ್ಥ ಮಾಡಿಕೊಳ್ಳಬಹುದಿತ್ತು.



ಇದು ಬೆಕ್ಕುಗಳಿಗೆ ಮೈ ತುರಿಸಿಕೊಳ್ಳುವ ಕಂಬ. ಕಂಬಕ್ಕೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹಾಗೂ ಉ.ಕೊರಿಯಾ ಮುಖಂಡ ಕಿಮ್ ಜಾಂಗ್ ಉನ್ ಚಿತ್ರಗಳನ್ನು ಅಂಟಿಸಲಾಗಿದೆ. ತಮ್ಮ ನಾಗರಿಕರಿಗೆ ಅಂತರ್ಜಾಲ, ಸುದ್ದಿಯ ಸೇವೆಯನ್ನು ನಿರ್ಬಂಧಿಸಿದ್ದಾರೆ ಈ ನಾಯಕರು. ಅವರ ಪರಿಚಯ ಮಾಡಿಕೊಡಲು ಆನ್‌ಲೈನ್ ಭದ್ರತೆ ಸೇವೆ ಒದಗಿಸುವ ಕಂಪೆನಿಯೊಂದು ಇದನ್ನು 7500 ಡಾಲರ್‌ಗೆ ಮಾರಾಟ ಮಾಡುತ್ತಿದೆಯಂತೆ. ನಾಯಕರ ಪರಿಚಯ ಬೆಕ್ಕುಗಳಿಗೆ ಮಾತ್ರ ಆದರೆ ಸಾಕೇ?



ಬಳಸಿ ಬಿಸಾಡಿದ ಕಂಚುಕಗಳನ್ನು ಬೀಜಿಂಗ್‌ನ ಮರು ಸಂಸ್ಕರಣ ಕೇಂದ್ರವೊಂದರಲ್ಲಿ ಗುಡ್ಡೆ ಹಾಕಲಾಗಿದೆ. ಆದರೆ ಇವು ಮರು ಸಂಸ್ಕರಣೆಗೊಂಡು ಕಾರ್ಪೆಟ್ ಆಗುವ ಬದಲು ಮತ್ತೆ ಅಂಗಡಿಗಳನ್ನು ಸೇರಿ ಮಾರಾಟ ಮಾಡುವ ಜಾಲ ಪತ್ತೆಯಾಗಿದೆಯಂತೆ. ಯಾರಿಗೆ ಗೊತ್ತು, ನಮ್ಮಲ್ಲೂ ಚೀನಾ ಬಜಾರ್‌ನಲ್ಲಿ ಸುಂದರವಾದ ಪ್ಯಾಕ್‌ನಲ್ಲಿ ಇವು ಕುಳಿತಿರಬಹುದು.




ಬುಡಾಪೆಸ್ಟ್‌ನಲ್ಲಿ 'ಜೈಲಿನಿಂದ ಪಾರಾಗುವ ಆಟ' ಜನಪ್ರಿಯವಾಗಿದೆ. ಹಳೆಯ ಕಟ್ಟಡಗಳಲ್ಲಿ ಜನ ಹಣ ಕೊಟ್ಟು ಕೊಠಡಿಯಲ್ಲಿ ಬಂಧನಕ್ಕೆ ಒಳಗಾಗುತ್ತಾರಂತೆ. ನಂತರ ಸೂಚನೆಗಳನ್ನು ಆಧರಿಸಿ ಬಿಡಿಸಿಕೊಳ್ಳುವ ಆಟವಿದು. ಜೈಲಿನಿಂದ ಪಾರಾದವರಿಂದ ಈ ಸೂಚನೆ, ಉಪಾಯಗಳನ್ನು ಕ್ರೋಢೀಕರಿಸಿರಬಹುದು.

ಬ್ರಿಟನ್ ಛಾಯಾಗ್ರಾಹಕ ಡೇವಿಡ್ ಸ್ಲೇಟರ್ ವಿಕಿಪಿಡಿಯ ಮೇಲೆ ಹಾಕಿದ ಕಾಪಿರೈಟ್ ಪ್ರಕರಣದಲ್ಲಿ ಸೋತು ಹೋಗಿದ್ದಾನೆ. ಮೂರು ವರ್ಷಗಳ ಹಿಂದೆ ಇಂಡೋನೇಷ್ಯಾದಲ್ಲಿ ತಾನು ತೆಗೆದ ಮಂಗಗಳ ಛಾಯಾಚಿತ್ರವನ್ನು ವಿಕಿಪಿಡಿಯ ತನ್ನ ಅನುಮತಿಯಿಲ್ಲದೇ ಬಳಸಿದೆ ಎಂಬುದು ಆತನ ಆರೋಪವಾಗಿತ್ತು. ಆದರೆ ಮಂಗವೊಂದು ಆತನ ಕ್ಯಾಮೆರಾ ಕಸಿದುಕೊಂಡು 'ಸೆಲ್ಫಿ' ಕ್ಲಿಕ್ಕಿಸಿಕೊಂಡಿತ್ತು. ಈಗ ಆ ಚಿತ್ರದ ಕಾಪಿರೈಟ್ ಆ ಮಂಗನದೇ ಎಂದು ವಿಕಿಪಿಡಿಯ ವಾದಿಸಿ ಗೆದ್ದಿದೆ. ನೀವೇನಾದರೂ ಆ ಚಿತ್ರ ಬಳಸಿದರೆ ಚಿತ್ರಕೃಪೆಯಲ್ಲಿ ಯಾವ ಮಂಗನ ಹೆಸರು ಹಾಕುತ್ತೀರೋ!